MR .CHAIRMAN.—The question is :

"That the Karnataka Command Area Development Bill, 1980, be passed."

*The Motion was adopted and the Bill was passed.*

## THE KARNATAKA SALES TAX (AMENDMENT) BILL, 1980.

*Motion to Consider*

SRI M. VEERAPPA MOILY (Minister for Finance and Co-operation).—Sir, I move—

"That the Karnataka Sales Tax (Amendment) Bill, 1980, be taken into consideration."

*The question was proposed.*

ಶ್ರೀ ಎಂ. ವೀರಪ್ಪ ಮೊಯ್ಲಿ (ಹಣಕಾಸಿನ ಮಂತ್ರಿಗಳು). – ಮಾನ್ಯ ಅಧ್ಯಕ್ಷರೇ, ಇದು ಬಹಳ ಸರಳವಾದಂಥ ಮಸೂದೆ. Shrimps, Prawns ಹಾಗೂ Lobsters ಮೇಲೆ ಪರ್ಚೇಸ್ ಟ್ಯಾಕ್ಸ್ ಹಾಕಿದ್ದೆವು. ಈ ಟ್ಯಾಕ್ಸನ್ನು ರೆಟ್ರಾಸ್ಪೆಕ್ಟೀವ್ ಆಗಿ ಫಸ್ಟ್ ಸೆಪ್ಟೆಂಬರ್ ೧೯೭೮ರಿಂದ ಹಾಕಿದ್ದಕ್ಕೆ ತಿದ್ದುಪಡಿಯನ್ನು ಸೂಚಿಸಿ, ಸೀನೇ ಷೆಡ್ಯೂಲ್‌ನಲ್ಲಿ ಫಸ್ಟ್ ಏಪ್ರಿಲ್ ೧೯೭೮ರಿಂದ Shrimps, Prawns, ಹಾಗೂ Lobsters ಮೀನುಗಳ ಮೇಲೆ ಪರ್ಚೇಸ್ ಟ್ಯಾಕ್ಸ್ ಹಾಕಿದ್ದೆವು. ಆದರ ಪ್ರಕಾರ ವಸೂಲು ಮಾಡುವುದಕ್ಕೆ ಹೋದಾಗ ಸಂಬಂಧಪಟ್ಟ ಉದ್ಯಮಿಗಳು ಅವರ ಒಂದು ಪ್ರಾಜೆಕ್ಟ್ ರಿಪೋರ್ಟ್ ಪ್ರಕಾರ ಸೇಲ್ಸ್ ಟ್ಯಾಕ್ಸ್ ಮತ್ತು ಪರ್ಚೇಸ್ ಟ್ಯಾಕ್ಸ್ ಸೇರಿಸದೇ ಅವರ ವ್ಯವಹಾರ ಮಾಡಿಕೊಳ್ಳುತ್ತಿದ್ದರು. ಇದರಿಂದ ಏನು ಪರಿಣಾಮವಾಯಿತು ಅಂದರೆ ಅನೇಕ ಉದ್ಯಮಗಳನ್ನು ನಡೆಸಲಿಕ್ಕೆ ಆತಂಕವಾಗಿ, ಕೈಗಾರಿಕೆಗಳು ನಿಂತುಹೋಗುವ ಸಂಭವ ಇದು ಬಹಳ ತೊಂದರೆ ಕೂಡ ಆಯಿತು. ಕೇರಳ ರಾಜ್ಯದ ಉದ್ಯಮಿಗಳು ಹೆಚ್ಚು ಸ್ಪರ್ಧೆಗೆ ಬಂದಾಗ ಎಕ್ಸ್‌ಪೋರ್ಟ್ ಮಾಡುವುದಕ್ಕೆ ಕೂಡ ತೊಂದರೆಯಾಗುತ್ತದೆ. ಇಡೀ ಕೈಗಾರಿಕೆಯನ್ನೇ ಮುಂದು ವರಿಸುವುದಕ್ಕಾಗುವುದಿಲ್ಲವೆಂದು ಮನವಿ ಬಂದ ಮೇಲೆ ರೆಟ್ರಾಸ್ಪೆಕ್ಟೀವ್ ಎಫ್‌ಕ್ಟೀವ್ ತೆಗೆದು, ಈ ಮಸೂದೆಯನ್ನು ತಂದ ತಾರೀಖಿನಿಂದ ಇದನ್ನು ಜಾರಿ ಮಾಡುವಂತೆ ಮಾಡಿದೆ. ಮೀನಿನ ಉದ್ಯಮದ ದೃಷ್ಟಿಯಿಂದ ಮತ್ತು ಟ್ಯಾಕ್ಸೇಷನ್ ಪಾಲಿಸಿ ಕೂಡ ರೆಟ್ರಾಸ್ಪೆಕ್ಟೀವ್‌ನಿಂದ ಟ್ಯಾಕ್ಸ್ ಹಾಕಿ ಆರ್ಥಿಕ ಬಲೋದ್ಪಂದನ ಹಾಕಿ ಉದ್ಯಮಿಗಳು ಉಸಿರು ಕಟ್ಟದಂತೆ ಮಾಡುವ ದೃಷ್ಟಿಯಿಂದ ಈ ತಿದ್ದುಪಡಿ ಮಸೂದೆಯನ್ನು ತಂದಿದ್ದೇವೆ. ೨ನೇ ವಿಚಾರ ಗ್ಲಾಸ್ ಬಾಟ್ಲಿಂಗ್ ೮ ಪರ್ಸೆಂಟಿನಿಂದ ೬ ಪರ್ಸೆಂಟಿಗೆ ಇಳಿಸಿದ್ದೇವೆ. ಇದು ಕೂಡ ನಮ್ಮಲ್ಲಿ ಒಂದೇ ಒಂದು ಕೈಗಾರಿಕೆ ಇದೆ : ಕೇರಳ ರಾಜ್ಯದಲ್ಲಿ ಅನೇಕ ಕೈಗಾರಿಕೆಗಳು ಇವೆ. ಅಲ್ಲಿ ೬ ಪರ್ಸೆಂಟ್ ಇದೆ, ನಾವು ೮ ಪರ್ಸೆಂಟ್ ಹಾಕಿದ್ದೆವು. ಇದರಿಂದಲೂ ಕೂಡ ಕೈಗಾರಿಕೆಗಳು ಬೆಳೆಯುವುದಕ್ಕೆ ತೊಂದರೆಯಿದ್ದುದರಿಂದ ೮ ಪರ್ಸೆಂಟ್ ಇದ್ದುದನ್ನು ೬ ಪರ್ಸೆಂಟಿಗೆ ಇಳಿಸುವಂಥ ತಿದ್ದುಪಡಿ ಕೂಡ ತಂದಿದ್ದೇವೆ. ಈ ಮಸೂದೆಗೂ ಕೂಡ ಈ ಮನೆಯ ಎರಡೂ ಕಡೆಯ ಸದಸ್ಯರುಗಳು ಮಂಜೂರಾತಿ ಕೊಡಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಗಂಗಾಧರನ್ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಈ ಒಂದು ಗ್ಲಾಸ್ ಇಂಡಸ್ಟ್ರಿ ಬಿದ್ದು ಹೋಗುತ್ತದೆ ಎಂದು ಈಗ ೮ ಪರ್‌ಸೆಂಟ್ ಇದ್ದುದನ್ನು ೬ ಪರ್‌ಸೆಂಟ್‌ಗೆ ಇಳಿಸಲು ಈ ಒಂದು ಬಿಲ್ಲನ್ನು ತಂದಿದ್ದೇವೆಂದು ಹೇಳುತ್ತಿದ್ದಾರೆ. ಇದರ ಬಗ್ಗೆ ಅವರು ಬಹಳ ಆಲೋಚನೆ ಮಾಡಿ ನೋಡ ಬೇಕಾಗಿದೆ. ಈ ಗ್ಲಾಸ್ ಇಂಡಸ್ಟ್ರಿ ಉದ್ಯಮದಿಂದ ಎಷ್ಟು ಜನ ಜೀವನ ಮಾಡುತ್ತಿದ್ದಾರೆ, ಎಷ್ಟು ಜನರಿಗೆ ಇದರಿಂದ ತೊಂದರೆಯಾಗುತ್ತದೆ. ಎನ್ನುವುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕಂ. ಇದಕ್ಕಾಗಿಯೇ ಒಂದು ಮಸೂದೆ ತರತಕ್ಕ ಅವಶ್ಯಕತೆ ಇರಲಿಲ್ಲ ಅಂತ ನನಗೆ ಅನ್ನಿಸುತ್ತಿದೆ. ಇಪ್ಪತ್ತು ಖಾದಿ ಗ್ರಾಮೋದ್ಯೋಗದಲ್ಲಿ ತಯಾರಾಗತಕ್ಕ ವಸ್ತುಗಳ ಮೇಲೆ ನಾಲ್ಕು ಪರ್‌ಸೆಂಟ್ ಸೇಲ್ಸ್‌ಟ್ಯಾಕ್

ಹಾಕುತ್ತಿದ್ದೀರಾ. ಬಡ ಜನತೆ ಉಪಯೋಗಿಸತಕ್ಕ ವಸ್ತುಗಳ ಮೇಲೆ ಟ್ಯಾಕ್ಸ್ ಹಾಕುತ್ತಿದ್ದೀರಾ ಅದರ ಬಗ್ಗೆ ತಮಗೆ ಕರುಣೆ ಇಲ್ಲ, ಇಲ್ಲಿ ಗ್ಲಾಸ್ ಬಗ್ಗೆ ಇಳಿಸಲಿಕ್ಕೆ ಹೊರಟಿದ್ದೀರಾ ? ಬಡವರು ಏನಾದರೂ ಬಾಟಲುಗಳನ್ನು ಕೊಂಡು ಕೊಂಡು ಜೀವನ ಮಾಡಬೇಕೇ ಏನು. ಈಗ ತಾವು ತಂದಿರ ತಕ್ಕದನ್ನು ನೋಡಿದರೆ ಬ್ರೆವರೀಸ್ ಕಂಪೆನಿಯವರಿಗೆ ಸಹಾಯ ಮಾಡಲಿಕ್ಕೆ ಈ ಮಸೂದೆಯನ್ನು ತಂದ ಹಾಗೆ ಕಾಣುತ್ತದೆ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಮಸೂದೆಯನ್ನು ತಂದಿಲ್ಲ. ಈಗ ಗ್ಲಾಸ್ ಬಾಟಲ್‌ಗೆ ಕನ್‌ಸೇಷನ್ ಕೊಡಬೇಕೆಂದು ಏನು ತಂದಿದ್ದಾರೆ ಇದು ಸೂಕ್ತವಾಗಿ ಕಾಣುತ್ತಿಲ್ಲ. ಇದಕ್ಕಿಂತಲೂ ಪ್ರಮುಖವಾಗಿರತಕ್ಕಂತಹವುಗಳು ಸಾಕಷ್ಟು ಇವೆ. ಅವುಗಳ ಬಗ್ಗೆ ಮಸೂದೆಯನ್ನು ತರದೇ ಅತ್ಯಂತ ಆತುರವಾಗಿ ಇದನ್ನು ತಂದಿರುವುದು ನೋಡಿದರೆ ಇದರ ಹಿಂದೆ ಯಾವುದೋ ಒಂದು ಪ್ರಭಾವಯುತ ಶಕ್ತಿ ಇದೆ ಎಂದು ಅರ್ಥವಾಗುತ್ತದೆ. ಈಗ ಇದನ್ನು ಬಡಿಲಾವಣೆ ಮಾಡುವುದು ಸೂಕ್ತವಲ್ಲ, ಈ ಕಾರಣದಿಂದ ತಾವು ತಂದಿರತಕ್ಕ ತಿದ್ದುಪಡಿ ಯುಕ್ತವಲ್ಲ ಎನ್ನುವ ಅಭಿಪ್ರಾಯವನ್ನು ಸೂಚಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಕೆ. ಪೆಚ್. ಶ್ರೀನಿವಾಸ್ (ಶಿವಮೊಗ್ಗ).—ಸನ್ಮಾನ್ಯ ಅಧ್ಯಕ್ಷರೆ, ಇದು ಪೂರ್ವಾನ್ವಯ ಮಾಡಿ ಇದಕ್ಕೆ ಹಾಕಿದ್ದಂಥ ಸೇಲ್ ಟ್ಯಾಕ್ಸನ್ನು ಮನ್ನಾ ಮಾಡಬೇಕು ಎನ್ನುವ ಅಭಿಪ್ರಾಯ ಪ್ರಮುಖವಾಗಿ ಈ ವಿಧೇಯದಲ್ಲಿ ಇರತಕ್ಕದ್ದು. ಈ ಒಂದು ವಿಧೇಯಕದ ಬಗ್ಗೆ ನಾನು ಎರಡು ಮೂರು ಸೃಷ್ಟೀಕರಣವನ್ನು ಕೇಳಲು ಬಯಸುತ್ತೇನೆ. ಇದು ಫಸ್ಟ್ ಏಪ್ರಿಲ್ ೧೯೭೬ರಿಂದ ಪೂರ್ವಾನ್ವಯ ವಾಗಬೇಕೆಂದು ಸೆಪ್ಟೆಂಬರ್ ೧೯೭೮ರಲ್ಲಿ ಇಷ್ಯು ಆಗಿತ್ತು,ಆನಂತರ ಆ ಸೇಲ್ಸ್‌ಟ್ಯಾಕ್ಸನ್ನು ಸಂಬಂಧಪಟ್ಟವರಿಂದ ಸರ್ಕಾರ ವಸೂಲು ಮಾಡಿನೆಯೇ, ಅಥವಾ ಮಾಡಿಲ್ಲವೆ, ಮಾಡದೇ ಇದ್ದರೆ ಏತಕ್ಕೆ ಮಾಡಲಿಲ್ಲ ಅನ್ನತಕ್ಕ ಪ್ರಶ್ನೆ ಬರುತ್ತದೆ. ಹಾಗೂ ಅದರ ಮೊತ್ತ ಎಷ್ಟಾಗುತ್ತದೆ. ಈ ತಿದ್ದುಪಡಿಯನ್ನು ತರುವುದರಿಂದ ಸರ್ಕಾರಕ್ಕೆ ಆಗತಕ್ಕ ನಷ್ಟ ಎಷ್ಟು ? ಅದರ ಮೊತ್ತವನ್ನು ಈ ಸಭೆಗೆ ತಿಳಿಸುವುದು ಅತ್ಯಗತ್ಯ. ನಾವು ಒಂದು ಮಸೂದೆಗೆ ಮಂಜೂರಾತಿ ಕೊಡಬೇಕಾದರೆ ಅದರಿಂದ ಸರ್ಕಾರಕ್ಕೆ ಲುಕ್ಸಾನು ಎಷ್ಟು ಆನ್ನುವುದನ್ನು ತಿಳಿದುಕೊಂಡು ಆದಕ್ಕೆ ನಾವು ಮಂಜೂರಾತಿ ಕೊಡಬೇಕೇ ಅಥವಾ ಬೇಡವೆ ಆನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಯಾವುದೇ ಒಂದು ಆರ್ಥಿಕ ವಿಷಯಕ್ಕೆ ಸಂಬಂಧಪಟ್ಟ ವಿಧೇಯಕ ಬಂದಾಗ ಅದರಿಂದ ಸರ್ಕಾರಕ್ಕೆ ಆಗತಕ್ಕ ಲಾಭ ಅಥವಾ ಅಂದಾಜು ನಷ್ಟ, ಅದರ ಸೃಷ್ಟೀಕರಣ ನೋಡಬೇಕಾಗುತ್ತದೆ. ಅವರಿಗೆ ಇದನ್ನು ಕೊಡಲಿಕ್ಕೆ ಹೊರೆಯಾಗಿ ರೆಪ್ರಸಂಟೇಷನ್ ಬಂದಿತ್ತು ಎಂದು ತಿಳಿಸಿದ್ದೀರಿ. ಈ ರೀತಿ ಎಕ್ಸ್‌ಪೋರ್ಟರ್ಸ್ ಎಷ್ಟು ಜನ ನಮ್ಮ ರಾಜ್ಯದಲ್ಲಿ ಇದ್ದಾರೆ. ಎಷ್ಟು ಪ್ರಮಾಣದಲ್ಲಿ ಎಕ್ಸ್‌ಪೋರ್ಟ್ ಆಗುತ್ತಿದೆ. ಆದಕ್ಕೆ ಬೇರೆ ಕಾಂಪಿಟೇಷನ್ ಯಾವುದು ಬಂದಿದೆ. ಆದರಿಂದ ಏನು ಧಕ್ಕೆಯಾಗಿದೆ ಈ ವಿಚಾರದ ಬಗ್ಗೆ ತಾವು ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿರಿ, ವಿವರವಾಗಿ ಪ್ರಸ್ತಾಪ ಮಾಡಲಿಲ್ಲ. ಇದರ ಬಗ್ಗೆ ಮಾನ್ಯ ಅರ್ಥ ಮಂತ್ರಿಗಳು ಪರಿಪೂರ್ಣವಾಗಿ ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಯಾವುದೇ ಟ್ಯಾಕ್ಸ್ ಹಾಕಿದರೂ ಕೂಡ ಅದಕ್ಕೆ ಸಂಬಂಧಪಟ್ಟ ಒಂದು ಲಾಬಿ ಇರುತ್ತದೆ. ಆ ಲಾಬಿಗೆ ಸಂಬಂಧಪಟ್ಟ ಮಂತ್ರಿಗಳನ್ನು ಹಿಡಿದು ಆ ಟ್ಯಾಕ್ಸ್ ಊರ್ಜಿತವಾಗದಂತೆ ಗಣನೀಯ ಪ್ರಮಾಣದಲ್ಲಿ ತಮ್ಮ ಹಣವನ್ನು ಉಳಿಸಿಕೊಳ್ಳುವುದು ಇದೆ. ಸರ್ಕಾರ ಅಂತಹ ಯಾವುದೇ ಒಂದು ಲಾಬಿಯ ಒತ್ತಡಕ್ಕೆ ಮಣಿಯಲಿಲ್ಲ ಅಂತ ತಿಳಿದುಕೊಳ್ಳಬೇಕಾದರೆ ತಾವು ಇದರ ಬಗ್ಗೆ ಅಂಕಿಅಂಶಗಳನ್ನು ಕೊಡಬೇಕಾಗುತ್ತದೆ. ಈಗ ಎಕ್ಸ್‌ಪೋರ್ಟ್ ಮಾಡತಕ್ಕವರು ಎಷ್ಟು ಜನ ಇದ್ದಾರೆ. ಎಷ್ಟು ಪ್ರಮಾಣದಲ್ಲಿ ಎಕ್ಸ್‌ಪೋರ್ಟ್ ಆಗುತ್ತಿದೆ. ಸಂಬಂಧಪಟ್ಟ ಪೀರಿಯಡ್‌ಗೆ ನಾವು ಅವರಿಂದ ನಿರೀಕ್ಷೆ ಮಾಡಬೇಕಾದ ಟ್ಯಾಕ್ಸ್ ಪ್ರಮಾಣ ಎಷ್ಟು. ಈ ಬಗ್ಗೆ ಸ್ಪಷ್ಟಪಡಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಮಾನ್ಯ ಹಣಕಾಸಿನ ಮಂತ್ರಿಗಳನ್ನು ಕೋರುತ್ತಾ ಪಡಿಸುತ್ತೇನೆ ಈ ಸೃಷ್ಟೀಕರಣ ನಮ್ಮ ಮನಸ್ಸಿಗೆ ನಾಟಿದರೆ ಈ ವಿಧೇಯಕಕ್ಕೆ ಬೆಂಬಲ ನಾವು ಕೊಡಬಹುದು. ಏಕೆಂದರೆ ತಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸರ್ಕಾರದ ಆರ್ಥಿಕ ಪರಿಸ್ಥಿತಿ ಬಹಳ ಹದಗೆಟ್ಟಿರುವುದರಿಂದ ಅಭಿವೃದ್ಧಿ ಕೆಲಸಗಳಿಗೆ ಹಣ ಇಲ್ಲ ಅನ್ನತಕ್ಕ ಮಾತನ್ನು ಅಲ್ಲಲ್ಲಿ ಮಾನ್ಯ ಮುಖ್ಯ ಮಂತ್ರಿಯವರು ಹೇಳಿರುವುದರಿಂದ ಈಗ ಬರುತ್ತಾ ಇರತಕ್ಕ ಆದಾಯವನ್ನು ಬಿಟ್ಟುಕೊಡುವುದು ಸರಿಯಲ್ಲ.ಇದಕ್ಕೆ ಸಮಾಧಾನಕರವಾದ ಉತ್ತರ ಇದ್ದು, ಬೇರೆ ಕಡೆ ಸಾಕಷ್ಟು ಆದಾಯ ಮಾಡುತ್ತೇವೆಂದು ಮಾನ್ಯ ಅರ್ಥ ಮಂತ್ರಿಗಳು ಹೇಳುವುದಾದರೆ ನಮ್ಮದು ಅಭ್ಯಂತರವಿಲ್ಲ, ಏಕೆಂದರೆ ಸರ್ಕಾರ ನಡೆಸಬೇಕಾದವರು ತಾವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸನ್ಮಾನ್ಯ ಅಧ್ಯಕ್ಷರವರೆ, ಮಾನ್ಯ ಸದಸ್ಯರಾದಂಥ ಶ್ರೀನಿವಾಸ್ ಅವರು ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ತಮಗೆ ತಿಳಿದಂತೆ ಇದು ನಾವು ಬಂದವೇಲೆ ರೆಪ್ರಸೆನ್‌ಟೇಷನ್ ಕೊಟ್ಟಿರುವುದು ಅಲ್ಲ. ತಾವು ಮಂತ್ರಿ ಮಂಡಲದಲ್ಲಿ ಇರುವಾಗಲೇ ಇದರ ಬಗ್ಗೆ ಕ್ಯಾಬಿನೆಟ್ ಗಣನೆಗೆ ರೆಪ್ರಸೆನ್‌ಟೇಷನ್ ಮೂಲಕ ತಂದಿದ್ದಾರೆ. ಈ ರೆಪ್ರಸೆನ್‌ಟೇಷನ್ ಹಿಂದೆ ಪ್ರಭಾವಯುತ ಶಕ್ತಿಗಳು ಇದ್ದಾರೆ ಎಂದು ತಾವು ಹೇಳಿದ ಮೇಲೆ ಆ ವಿಚಾರ ಕೂಡ ತಮಗೆ ಪೂರ್ತಿ ಗೊತ್ತಿರಬೇಕು. ಯಾವ ಶಕ್ತಿ ಈ ಮಸೂದೆಯನ್ನು ತಯಾರು ಮಾಡಲಿಕ್ಕೆ ಇದೆ ಆ ವಿಮರ್ಶೆಗೆ ನಾನು ಹೋಗಿಲ್ಲ. ಏಕೆಂದರೆ ನಾವು ಕಂಡುಕೊಂಡದ್ದು ಏನು ಅಂದರೆ ಈ ವಿಧೇಯಕ ಆಗ ಬಂದಿದ್ದು, ಆರ್ಡಿನೆನ್ಸ್ ಇಶ್ಯು ಆಗಬೇಕಾಗಿತ್ತು. ಯಾವುದೋ ಕಾರಣದಿಂದ ಆಗಲಿಲ್ಲ. ಆ ಮಸೂದೆ ನಮ್ಮ ಮುಂದೆ ಬಂದದ್ದು ನಾವು ಅದರ ಗುಣಮಟ್ಟವನ್ನು ನೋಡಿ ಈ ಮಸೂದೆಯನ್ನು ಈ ಸದನದ ಮುಂದೆ ತಂದಿದ್ದೇವೆ. Sea-food industry is a infant industry in Karnataka. It has not developed as much as it has developed in Kerala. ಉದ್ಯಮದಲ್ಲಿ ಸಾಕಷ್ಟು ಸ್ಪರ್ಧೆ ಇದೆ. Practically almost all units are sick ; many of them have stopped. We found that they are trying to sell it away to some other party. ಈ ಮಸೂದೆ ತಯಾರು ಮಾಡಲಿಕ್ಕೆ ಪ್ರಭಾವಯುಂತ ಶಕ್ತಿ ಇದೆಯೇ ಇಲ್ಲವೇ ಆ ಹಿನ್ನೆಲೆ ವಿಚಾರ ಮಾಡಲಿಕ್ಕೆ ಹೋಗಲಿಲ್ಲ. ಈ ಉದ್ಯಮಗಳ ದೃಷ್ಟಿಯಿಂದ ಆ ವಾಲ್ಯಗಳನ್ನು ಕ್ರೋಢೀಕರಣ ಮಾಡಿ ಈ ಮಸೂದೆ ನೋಡಿದ್ದೇವೆ. To be very frank, we have not met these peopje after we formed the Government ಬಹುಶಃ ಈ ವಿಷಯು ತಮಗೆ ಗೊತ್ತಿರಬಹುದು. Lobbying, if at all has been made, must have been made with the previous Government,and the hon. members knows the background.

4-30 P. M.

† SRI K. H. SRINIVAS.— I have not made any allegation. Before I spoke there was another hon. Member who has stretched that point. That was why I said that unless you convince the House with relevant statistics pertaining to the financial implications of the Bill, the impression may be conveyed that the Government has played into the hands of some lobby. Lest such an impression should be created I only wanted the hon. Finance Minister to just elaborate and support his statement with some statistics such as the financial implications involved in the Bill. I did not make any allgeation.

SRI VEERAPPA MOILY.–I think we will have to seriously look into this matter and findout whether any lobby has played any part in it, If that it so, I am prepared to withdraw it and see whether any force have played their game in it or whether any vested interests are behind it. We are not prepared to kill this industry and allow it to thrive in the neighbouring State of Kerala. Looking into all aspects of the industry we felt that we need not meet the people who represented to us. If member have a serious doubt that some vested interests are behind it, I think we can look into this matter. We are not originators or initiators of this Bill but we found on merit, that this bottling small scale industry should develop here. This is a development economy; it connot be a restrictive economy. ಕೇರಳದಲ್ಲಿ ಒ

ಪರ್ಸೆಂಟ್ ಟ್ಯಾಕ್ಸ್ ಇದೆ, ನಮ್ಮ ಕರ್ನಾಟಕದಲ್ಲಿ ೮ ಪರ್ಸೆಂಟ್ ಟ್ಯಾಕ್ಸ್ ಇದೆ. ಅಲ್ಲಿ ೬ ಪರ್ಸೆಂಟ್ ಇರುವುದರಿಂದ ಎಲ್ಲ ಕೈಗಾರಿಕೆಗಳೂ ಕೇರಳದಲ್ಲೇ ಸ್ಥಾಪನೆಯಾಗುತ್ತಿವೆ. ನಮ್ಮಲ್ಲಿ ಬಹಳ ಕಡಿಮೆ. ನಾವು ಕೈಗಾರಿಕಾಭಿವೃದ್ಧಿಯಾಗಬೇಕೆಂಬ ದೃಷ್ಟಿಯಿಂದ, ಕೆಲಸ ಮಾಡಿದರೆ, ಇಲ್ಲಿಯೂ ಕೂಡ ಹೆಚ್ಚು ಹೆಚ್ಚು ಕೈಗಾರಿಕೆಗಳು ಸ್ಥಾಪನೆಯಾಗುತ್ತವೆ; ಆದರಿಂದ ನಮಗೆ ಹೆಚ್ಚು ಪರಮಾನವೂ ಕೂಡ ಬರುತ್ತದೆ. ನಾವು ಕೈಗಾರಿಕೆಗಳಿಗೆ ಹೆಚ್ಚು ಟ್ಯಾಕ್ಸ್ ಪಾಕಿ ಅವುಗಳನ್ನು ನಿಶ್ಚೇತನ ಮಾಡಬೇಕೆಂಬ ಉದ್ದೇಶ ವಿಲ್ಲ. ಕಳೆದ ೧೯೭೬ ರಿಂದ ೭೮ ರವರೆಗೆ ಟ್ಯಾಕ್ಸ್‌ನ್ನು ವಸೂಲ್ಮಾಡಿದ್ದರೆ ಸುಮಾರು ೪೦ ಲಕ್ಷ ರೂಪಾಯಿ ಬರುತ್ತಿತ್ತು. ಆದರೆ ನಾವು ಅದನ್ನು ವಸೂಲ್ಮಾಡಲಿಲ್ಲ. There are several factors which go into the project. This particular factor of purchase tax has not gone into this project. ನಾವು ಆ ೪೦ ಲಕ್ಷ ರೂ. ಗಳನ್ನು ವಸೂಲ್ಮಾಡುವುದಕ್ಕೆ ಹೋದರೆ ಇಡೀ ಕೈಗಾರಿಕೋದ್ಯಮವನ್ನೇ ನಿಶ್ಚೇಷ್ಟಿತಗೊಳಿಸಿದಂತಾಗುತ್ತದೆ. ನಾವು ವಸೂಲ್ಮಾಡದೇ ಬಿಟ್ಟರತಕ್ಕ ೪೦ ಲಕ್ಷ ರೂ. ಗಳು ನಮಗೆ ನಷ್ಟವೆಂದು ಹೇಳುವುದಕ್ಕೆ ಬರುವುದಿಲ್ಲ. So far as an infant industry like the seafood industry is concerned, on the face of the record and on the merit of the case, we find that it is not advisable.

SRI J. H. PATEL.— Rule 68 (1) provides that a Bill involving expenditure shall be accompanied by a financial memorandum. ಈ ಮಸೂದೆ ತರುವುದರ ಜೊತೆಗೆ ಇದಕ್ಕಾಗಿ ಎಷ್ಟು ವೆಚ್ಚ ತಗಲುತ್ತದೆಂಬುದನ್ನು ತಿಳಿಸಬೇಕಾಗಿತ್ತು. ಇದು ರೆಕರಿಂಗೋ ಆಫವಾ ನಾನ್ ರೆಕರಿಂಗೋ ಎಂಬುದನ್ನು ಸ್ಪಷ್ಟವಾಗಿ ತಿಳಿಸದೆ ಈ ಬಿಲ್ಲನ್ನು ತಂದಿರುವುದನ್ನು ನೋಡಿದರೆ ಸರಿಯಾದ ನಿಯಮಗಳನ್ನು ಪಾಲಿಸದೆ ಈ ಬಿಲ್ಲನ್ನು ತಪ್ಪಾಗಿ ಇಲ್ಲಿ ತಂದಿದ್ದೀರೆಂದು ಅನಿಸುತ್ತದೆ.

SRI M. VEERAPPA MOILY.— There is no recurring or nonrecurring expenditure or additional expenditure; nor is any additional staff involved.

SRI K. H. SRINIVAS.— I did not get a reply to even one of my requests. My precise request was that this is a Bill which seeks to nullify a taxation. That means, the money that is due to the Government is sought to be waived off: I wanted that the Government should explain the exact financial implications or at least the national revenue that this Governnmet should have expected provided the Government machinary was alert to collect the tax. So I would like to know what exactly was that national revenue which now the Government in its wisdom wants to waive off. I am not a person to come in the way but I would like to know the reason because the hon, Finance Minister was pleased to say that this was an infant industry and that Government wants to encourage it. I wanted to know something about the industry. I wanted to know how many persons are engaged in this industry, what is the quantity that is being exported and in what way you are going to help them by the just waiving this portion of the tax.

Another thing is, I wanted to know, why the Government machinary did not try to collect this amount. That is a very important thing. The Government probably had not dreamt that ultimately

hey will have to come to t'.e rescue of these people and waive the tax. If the exporters had impinged the law, they would have been hauled up for lapses on their part. After all the Government cannot sleep over the matter or delegate such powers to the officers. Why efforts were not make to collect this tax. ?

SRI M. VEERAPPA MOILY:— The amount involved is about Rs. 31 lakhs for the period from 1--4-76 to 1-4-1978; only that period was prescribed for giving retrospective effect. The Government, by making provisions for giving retrospective effect to the Bill was trying to create a demand for collection of tax for that particular period. That demand did not exist in reality so far as that particular Industry is concerned.

SRI K. H. SRINIVAS:— You are pleading a very fallacious proposition for which you will have to repent afterwards because as Finance Minister, you will have upteen occasions. If you want to subscribe to your proposition, then every taxation measure which has got a retrospective component, is bad and I think our state revenues are going to be in diffculties.

SRI M. VEERAPPA MOILY.-I am aware of the financial implications I am aware of what I am speaking. I am referring to the case in hand, namely, shrimps & lobsters. ಮೌಲ್ಯಗಳನ್ನು ಬದಲಾವಣೆ ಮಾಡುತ್ತಾ ಹೋದರೆ ಅದರ ದುಷ್ಪರಿಣಾಮ ಫ್ಯಾಕ್ಟರಿಗಳ ಮೇಲೆಆಗುತ್ತದೆ. ಆದ್ದರಿಂದ ಕೈಗಾರಿಕೆಗಳು ಅಭಿವೃದ್ಧಿಯಾಗ ಬೇಕಾದರೆ ಅದರ ಮೌಲ್ಯಗಳನ್ನು ಕಾಪಾಡಿಕೊಂಡು ಬರಬೇಕು. ದೇಶಕ್ಕೆ ಯಾವುದು ವಿಹಿತವೋ ಇದನ್ನು ಮಾಡಬೇಕಾಗಿರುತ್ತದೆ. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್‌ರವರು ಯಾವುದು ಒಳ್ಳೆಯದೋ ಅದನ್ನು ಮಾಡತಕ್ಕಂಥ ಒಂದು ಸತ್‌ಸಂಪ್ರದಾಯವನ್ನು ಉಳಿಸಿಕೊಂಡು ಬರಬೇಕೆಂದು ಹೇಳಿರುತ್ತಾರೆ. ಅದ್ದರಿಂದ ಯಾವುದೇ ಸರ್ಕಾರವಿರಲಿ, ನಿಮ್ಮ ಸರ್ಕಾರದವರು, ನಿಮ್ಮ ಮಂತ್ರಿ ಮಂಡಲದವರು ಇದ್ದಾಗ ಮಾಡಿರುವ ಒಳ್ಳೆಯ ಕಾರ್ಯವನ್ನು ಖಂಡನೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಆ ವಿಚಾರ ಈಗ ಅನಾವಶ್ಯಕ.

ಶ್ರೀ ಕೆ. ಹೆಚ್. ಶ್ರೀನಿವಾಸ್.— ದಯವಿಟ್ಟು ತಾವು ಆ ರೀತಿ ತಿಳಿದುಕೊಳ್ಳಬೇಡಿ. ನಾವು ಯಾವುದೇ ರೀತಿಯ ಆಪಾದನೆಯನ್ನು ತಮ್ಮ ಮೇಲೆ ಮಾಡುವುದಕ್ಕೆ ಹೋಗುವುದಿಲ್ಲ. ನಾನು ಹೇಳುತ್ತಿರುವುದೇನೆಂದರೆ ನೀವು ಕೊಡುತ್ತಾ ಇರತಕ್ಕಂಥ ಪರಿಹಾರದಲ್ಲಿ ಸರ್ಕಾರಕ್ಕೆ ಬರುವಂಥ ಆದಾಯ ಏತಕ್ಕೆ ಲೂಕ್ಸಾನಾಗುತ್ತದೆ. ಇದಕ್ಕೆ ಕಾರಣವೇನು ಎಂದು ಪ್ರಶ್ನೆ ಕೇಳುತ್ತಿದ್ದೇನೆ, ಯಾವುದೇ ಒಂದು ಕೈಗಾರಿಕೆಗೆ ನಿರ್ದಿಷ್ಟವಾದ ಸೌಲಭ್ಯಗಳನ್ನು ಕೊಡುತ್ತಾ ಇದ್ದು ವಿಧೇಯಕದ ಮೂಲಕ ಅವರು ಕೊಡ ತಕ್ಕಂಥ ಟ್ಯಾಕ್ಸ್ ಎಷ್ಟು ಎಂಬುದನ್ನು ನೀವು ಮೊದಲು ಹೇಳಲಿಲ್ಲ. ಈಗ ಮೂವತ್ತೊಂದು ಲಕ್ಷ ರೂಪಾಯಿ ಹೆಚ್ಚಾಗಿದೆ ಎಂದು ಹೇಳುತ್ತಿದ್ದೀರಿ. ಇದು ಏನು ಕಡಿಮೆ ಪ್ರಮಾಣದ್ದು ಅಲ್ಲ. ಆ ಕೈಗಾರಿಕೆಯಲ್ಲಿ ಎಷ್ಟು ಜನ ಇದ್ದಾರೆ. ಅವರು ಪ್ರತಿವರ್ಷ ಎಷ್ಟೊಂದು ಪ್ರಮಾಣದಲ್ಲಿ ಎಕ್ಸ್‌ಪೋರ್ಟ್ಸ್ ಮಾಡುತ್ತಾ ಇದ್ದಾರೆ; ಅದರ ವಿವರಣೆ ನಮಗೆ ಬೇಕಾಗಿದೆ. ಒಂದು ವೇಳೆ ೩೫ ಕೋಟಿ ರೂಪಾಯಿ ಮಾಲನ್ನು ಎಕ್ಸ್‌ಪೋರ್ಟ್ ಕಳುಹಿಸುತ್ತಿದ್ದರೆ ಆಗ ೩೧ ಲಕ್ಷ ರೂಪಾಯಿಗಳನ್ನು ಬಿಟ್ಟು ಕೊಟ್ಟರೂ ಅದು ಏನು ದೊಡ್ಡ ಪ್ರಶ್ನೆಯಲ್ಲ. ಆದುದರಿಂದ ಕೈಗಾರಿಕೆಯ ಸ್ವರೂಪವನ್ನೇ ತಿಳಿದುಕೊಳ್ಳದೆ 'ಎಸ್' ಆರ್ 'ನೋ' ಎಂದರೆ ಎರಡಕ್ಕೂ ಅರ್ಥವಿಲ್ಲ. ಇದಕ್ಕೆ ಸರಿಯಾದ ವಿವರಣೆಯನ್ನು ಕೂಡದಿದ್ದರೆ ನೀರಿನಲ್ಲಿ ಎಣ್ಣೆಯನ್ನು ಮುಳುಗಿಸಿಕೊಂಡು ವ್ಯಾಪಾರ ಮಾಡಿದಂತಾಗುತ್ತದೆ. ಎಷ್ಟು ಹಾಕಿದ್ದೇವೆ ಎನ್ನುವುದು ಗೊತ್ತಿಲ್ಲ, ಎಷ್ಟು ಬರುತ್ತದೆ ಎನ್ನುವುದು ಗೊತ್ತಿಲ್ಲವೆಂದು ಹೇಳಿದರೆ ಅದು ಸರಿಯಲ್ಲ. ಯಾರೋ

ಒಬ್ಬರು ಹೇಳಿದರು ಅದಕ್ಕೆ ನಾವು ಬಿಟ್ಟುಕೊಟ್ಟೆವು. ಮತ್ತೆ ಯಾರೋ ಒಬ್ಬರು ಟ್ಯಾಕ್ಸ್ ಹಾಕಿ ಎಂದರು ಅದಕ್ಕೆ ಟ್ಯಾಕ್ಸ್ ಹಾಕುತ್ತೇವೆಂದರೆ ಅದೂ ಕೂಡ ಸರಿಯಲ್ಲ. ಆದ್ದರಿಂದ ಇದಕ್ಕೆಲ್ಲ ವಿವರಣೆ ಕೊಡದೇ ಹೋದರೆ ನಮಗೆ ಈ ವಿಷಯವನ್ನು ತಿಳಿದುಕೊಳ್ಳಲು ಬಹಳ ಕಷ್ಟವಾಗುತ್ತದೆಂದು ಹೇಳುತ್ತೇನೆ.

SRI M.VEERAPPA MOILY.—Even now I know but I do not want te spell out the period; I do not want to spell out the persons involved but if you want to know it, in a private conversation, I can convice you. For instance, so far as the Leather Industry is concerned, certain levy was made about a decade ago and you know the implications. The entire industry was shifted to Vanambadi. When I vistied Vanambadi. they told me that they were running the industry in Karnataka but they had to shift it from there on account of financial implications, a wrong decision taken at a particular time. That particular leather industry was an infant industry and by the shifting that industry, Tamilnadu is now occu ying No. 1 place in Leather industry. I think Karnataka stands somewhere sixth or seventh. Sea-food industry is an infant industry as far as Karnataka is concerned. This House must come to a conclusion wh ther that infant industry should die at this stage or thrive atleast in parallel with the industry in Kerala. This is my point.

ಇಷ್ಟೇ ಅಲ್ಲದೆ ನಾವು ಯಾವ ನಿರ್ದಿಷ್ಟವಾದ ಆಪಾದನೆಗಳನ್ನು ಮಾಡಲಿಲ್ಲ. ಆ ಕೈಗಾರಿಕೆಯ ಸ್ವರೂಪವನ್ನು ವಿವರಿಸಬೇಕೆಂದು ನಾನು ಹೇಳುತ್ತಿದ್ದೇನೆ. ನೀವು ಏನು ಮಾಡಿದರೂ ಆ ಕೈಗಾರಿಕೆಯ ಬಗ್ಗೆ, ಅದರ ರಫ್ತು ಎಷ್ಟು ಎಂಬ ಬಗ್ಗೆ ವಿವರಣೆ ಕೊಡುತ್ತಾ ಇಲ್ಲ. ಆ ಬಗ್ಗೆ ವಿವರಣೆ ಇಲ್ಲದೇ ಹೋದರೆ ಅದನ್ನು ಪಡೆದುಕೊಂಡು ಹೇಳಿ. ಈ ಸ್ಟೇಟ್‌ಮೆಂಟ್ ತಪ್ಪು ಎಂದು ಹೇಳುವುದಿಲ್ಲ. ಆದರೆ ವಿವರಣೆ ಇದೆಯೋ ಇಲ್ಲವೋ ಎಂಬುದನ್ನು ಮಾತ್ರ ಹೇಳಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ ಈಗ ನಾನು ಇದನ್ನು ಯಾವುದೇ ಟ್ಯಾಕ್ಷೇಷನ್ ರೆಪ್ರಸೆಂಟೇಷನ್ ಮಾಡುವ ಪ್ರಸ್ತಾಪದಲ್ಲಿ ನಾನು ಒಪ್ಪುವುದಿಲ್ಲವೆಂದು ನಾನು ಹೇಳಿಲ್ಲ. ಈ ಸೀಫುಡ್ ಇಂಡಸ್ಟ್ರೀಸ್‌ನಲ್ಲಿ ಮುಖ್ಯವಾಗಿ ಪರ್ಚೇಸ್ ಟ್ಯಾಕ್ಸ್ ವಿಚಾರ ಬಂದಾಗ, ಈ ಕೈಗಾರಿಕೆ ಇನ್ನೂ ಒಂದು ಶೈಶವಾವಸ್ಥೆಯಲ್ಲಿ ಇದೆ. ಆದುದರಿಂದ ಅಪರ ಒಂದು ಪ್ರಾಜೆಕ್ಟ್ ರಿಪೋರ್ಟ್ ಮಾಡಿದ್ದಾರೆ. ಅದನ್ನು ಮಾಡುವಾಗ, ಪರ್ಚೇಸ್ ಟ್ಯಾಕ್ಸ್ ವಿಚಾರವನ್ನು ಆಲೋಚನೆ ಮಾಡಿ ಮಾಡಿದ್ದಾರೆ. ಆದುದರಿಂದ ಈ ಕೈಗಾರಿಕೆಯ ಮಟ್ಟಿಗೆ ಏಟನ್ನು ಹಾಕಿದರೆ ತಡೆಯಲಾರದೆಂದು, ಆ ಕೈಗಾರಿಕೆಯನ್ನು ಮುಚ್ಚುವ ಪರಿಸ್ಥಿತಿ ಬರಬಹುದೆಂದು ಹೇಳುವ ವಿಚಾರವನ್ನು ಪರಿಸುತ್ತಿದ್ದಾಗ ವ್ಯಾಖ್ಯಾನ ಮಾಡಿದ್ದೀರಿ. ನಾನು ಹೇಳಿದೆ ಈ ಕೈಗಾರಿಕೆಯಿಂದ ೩೧ ಲಕ್ಷ ರೂಪಾಯಿಯನ್ನು ವಸೂಲು ಮಾಡಬಹುದಾಗಿತ್ತು ಎಂದು. ಅದನ್ನು ವಸೂಲು ಮಾಡಿಲ್ಲ. It is only a national loss. Nothing else. ಇನ್ನು ಎಷ್ಟು ಜನ ಕೈಗಾರಿಕೆಯಲ್ಲಿ ಉದ್ಯೋಗದಲ್ಲಿದ್ದಾರೆಂದು ತಾವು ಕೇಳಿದ್ದೀರಿ. ಆ ವಿಚಾರದಲ್ಲಿ ಕಂಕಿ ಅಂಶಗಳು ನನ್ನಲ್ಲಿ ಇಲ್ಲ. ಆದುದರಿಂದ ಈ ಕೈಗಾರಿಕೆ ಅಭಿವೃದ್ಧಿ ಆಗುವ ದೃಷ್ಟಿಯಲ್ಲಿ, We have made known to them : 'You are liable to pay purchase tax from 1-4-1978, the date on which the Act came into force. ಅದನ್ನು ತಪ್ಪಿಸುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಏತಕ್ಕೆ ವಸೂಲಿಯನ್ನು ಮಾಡಿಲ್ಲ ಎಂದರೆ, ಸರ್ಕಾರಕ್ಕೆ ಆಗ ಮನವಿಯನು ಕೊಟ್ಟಿದ್ದಾರೆ. ಮನವಿಯನು ಕೊಟ್ಟಾಗ ವಸೂಲು ಮಾಡಿಲ್ಲ. ಬಹುಶಃ ಆಗಿನ ಕಾನೂನುಗಳಿಂದ ಏನಾದರೂ ತೊಂದರೆ ಇತ್ತೋ ಏನೋ. ಬಹುಶಃ ಆಗಿನ ಆಡಳಿತಗಾರರು ನೋಡಬೇಕಾಗಿತ್ತು.

ಶ್ರೀ ಎಚ್.ಡಿ. ದೇವೇಗೌಡ.—ಮಾನ್ಯ ಮಂತ್ರಿಗಳು ಕೊಟ್ಟ ಉತ್ತರದಲ್ಲಿ ನಾನು ತಿಳಿದ ರೀತಿಯಲ್ಲಿ ೩೧ ಲಕ್ಷ ರೂಪಾಯಿ ಆರಿಯರ್ಸ್ ಬರಬೇಕಾಗಿತ್ತು. ಇದು ನ್ಯಾಷನಲ್ ಲಾಸ್ ಅಲ್ಲದೆ ಬೇರೆ ಅಲ್ಲ. ೧-೪-೧೯೭೬ರಲ್ಲಿ ರೆಟ್ರಾಸ್ಪೆಕ್ಟೀವ್ ಎಫೆಕ್ಟಾಗಿ ಕೊಡುವ ಹಾಗೆ ಈ ಟ್ಯಾಕ್ಸ್‌ನ್ನು ಕ್ರಿಯೇಟ್ ಮಾಡಿದ್ದರೆ ೩೧ ಲಕ್ಷ ರೂಪಾಯಿ ಬರುತ್ತಾ ಇತ್ತು. ಈ ತಿದ್ದುಪಡಿ ಮಸೂದೆಯನ್ನು ಸಭೆಯ ಮುಂದೆ ತಂದಿದ್ದೀರಿ, ಕನ್‌ಸೆಷನ್ ಕೊಡಬೇಕೆಂದು. ಯಾರು ಈ ಕೈಗಾರಿಕೆಯನ್ನು ನಡೆಸುತ್ತಿದ್ದಾರೆ ? ಅವರು ನಿಮಗೆ ಕನ್‌ಸೆಷನ್ ಕೊಡಬೇಕೆಂದು ಮನವಿಯನ್ನು ಸಲ್ಲಿಸಿದರೆ ? ಏಕೆ ಸರ್ಕಾರ ತೆರಿಗೆ ಹಾಕುವಾಗ ೮ ಪರ್ಸೆಂಟ್ ಟ್ಯಾಕ್ಸ್ ಲೆವಿ ಮಾಡುವಾಗ ಇಂತಹ ಕೈಗಾರಿಕೆ ಮೇಲೆ ಪೆಟ್ಟು ಬೀಳುತ್ತದೆಂದು ನಿಮ್ಮ ಗಮನಕ್ಕೆ ತರಲಿಲ್ಲವೆ ? ಯಾರು ಯಾವಾಗ ಮನವಿಯನ್ನು ಸಲ್ಲಿಸಿದ್ದಾರೆ. ನಿಮ್ಮ ಇಲಾಖೆಯ ಅಧಿಕಾರಿಗಳು ಮನವಿಯ ಆಧಾರದ ಮೇಲೆ, ಸರ್ಕಾರಕ್ಕೆ ಏನು ರಿಪೋರ್ಟ್ ಕಳುಹಿಸಿದ್ದಾರೆ ? ನಿಮ್ಮ ಅಧಿಕಾರಿಗಳು ರಿಪೋರ್ಟ್ ಕಳುಹಿಸುವಾಗ ಬರೀ ರಿಪೋರ್ಟ್‌ನ್ನೇ ಅವಲಂಬಿಸಿ ತಯಾರಿಸಿದ್ದಾರೆಯೇ ? ಅವರು ಆ ಕೈಗಾರಿಕೆಯಲ್ಲಿ ಲಾಸ್ ಆಗುತ್ತಿದೆಯೋ ಇಲ್ಲವೋ ಎಂಬುದನ್ನು ತಿಳಿದು ರಿಪೋರ್ಟ್ ತಯಾರಿಸಿದ್ದಾರೆಯೇ ? ದಯಮಾಡಿ ವಿವರಣೆಯನ್ನು ಕೊಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ಬಗ್ಗೆ ಅನೇಕ ಸಾರಿ ಮನವಿಯನ್ನು ಕೊಟ್ಟಿದ್ದಾರೆ. ನನ್ನ ಫೈಲಿನಲ್ಲಿ ಇರತಕ್ಕ ಆಧಾರದ ಮೇಲೆ ೧೩-೧೦-೧೯೭೭ರಲ್ಲಿ ಒಂದು ಮನವಿ ಇದೆ.

SRI H.D. DEVEGOWDA.—How can they expect that this House is going to levy the tax of 8% ? How did the representation come in 1977 itself when the bill was passed in 1978 ?

SRI M. VEERAPPA MOILY.—On 13-10-1977 there was representation which was given to the then Finance Minister Sri M. Y. Ghorpade.

ಶ್ರೀ ಎಚ್.ಡಿ. ದೇವೇಗೌಡ.—ಶ್ರೀ ಘೋರ್ಪಡೆಯವರ ಕಾಲದಲ್ಲಿ ಈ ಮನವಿಯನ್ನು ಕೊಟ್ಟಿರುವುದಾಗಿ ಹೇಳಿದ್ದೀರಿ ತಾವು ದಯಮಾಡಿ ತಮ್ಮ ಮುಂದೆ ಆ ಫೈಲ್ ಏನಿದೆ ಅದನ್ನು ಪರಿಶೀಲನೆ ಮಾಡುವುದು ಅವಶ್ಯಕ. ಅವರಿಂದ ರೆಪ್ರಸೆಂಟೇಷನ್ ಬಂದಿರುವುದು ೧೯೭೭ರಲ್ಲಿ. ಬಿಲ್ ಪಾಸ್ ಆಗಿರುವುದು ೧೯೭೮ರಲ್ಲಿ. ೮ ಪರ್ಸೆಂಟ್ ಟ್ಯಾಕ್ಸ್ ಹಾಕುತ್ತಾರೆಂದು ಅವರಿಗೆ ಪೂರ್ವಭಾವಿಯಾಗಿ ಗೊತ್ತಾಗಿನಿಯೆ ? ಆಮೇಲೆ ಯಾರೋ ಆ ಕೈಗಾರಿಕೆಯ ಮಾಲೀಕರೆಂದು ಹೇಳಿದ್ದೀರಿ. ಆ ಮಾಲೀಕರ ಹೆಸರನ್ನು ದಯವಿಟ್ಟು ಹೇಳಿ. This has to be examined thoroughly, and this cannot be hustled through like this.

ಶ್ರೀ ಎಂ. ವೀರಪ್ಪ ಮೊಯಿಲಿ.—೧೯೭೭ರಲ್ಲಿ ಮನವಿಯನ್ನು ಕೊಟ್ಟಿದ್ದಾರೆ.

ಶ್ರೀ ಜೆ ಎಚ್. ಪಟೀಲ್.—ಆ ಮನವಿಯನ್ನೇ ಪರಿಗಣನೆಗೆ ತೆಗೆದುಕೊಂಡು ೧೯೭೮ರಲ್ಲಿ ಸದನದಲ್ಲಿ ಕಾನೂನು ಮಾಡಿರುವುದು.

MR. SPEAKER.—He wants certain clarifications.

SRI M. VEERAPPA MOILY.—I will give reply to certain points. I was just tracing out what is happening to the Sea Food Industry. I was just tracing out the history of the representation of the Sea Food Industry.

SRI C. M. ARUMUGHAM.—The Hon. Finance Minister has said that if this small measure is passed, the Government is not going to loose anything. Therefore, he said that there is no need for any financial statement, as demanded to be given. But in this very Bill, it has been stated thus :

> "...Having regard to the representations made by such dealers that may be exempted from payment of purchase

tax relating to said articles upto 1st April 1978 and that they are willing to pay the tax from 1st April 1978, it is proposed toimpose that liability only from1st April 1978..."

5-00 P.M.

Even if it involves one rupee, it is not correct. Loss is a loss to the Government. We would like to know who are the dealers that represented to the Government. By this national loss of Rs 31 lakhs to the Government, how many would be benifitted ? Are those people sending their products to foreign countries and thereby have incurred any loss ? These financial aspects are not made clear in this Bill. This Bill is not properly drafted. The sailent points should have been highlighted I submit that since there is no hurry in passing this Bill and even if we delay, the Government will not suffer any loss. I request this Bill may be referred to a Joint Select Committee. This Bill may be a small Bill, but this involves certain principle. In order to help somebody, Government must not bring any amendment to the Act. We want to know who represented to the Government. It is not possible to elicit answers during the course of discussion of this Bill. If the Chair asks the Hon'ble Member to go to his Chamber perhaps the Hon. Member will give all the facts. I request, this Bill be referred to a Select Committee.

† ಶ್ರೀ ಎಚ್. ಡಿ. ದೇವೇಗೌಡ.—೧೯೭೮ರಲ್ಲಿ ಈ ವಿಧೇಯಕವನ್ನು ಪಾಸ್ ಮಾಡಿದ ಮೇಲೆ ಸೆಸ್‌ನ್ನು ಕಲೆಕ್ಟ್ ಮಾಡತಕ್ಕಂತದ್ದು ಅಧಿಕಾರಿಗಳ ಕರ್ತವ್ಯ. ಅಧಿಕಾರಿಗಳು ಅದನ್ನು ಕಲೆಕ್ಟ್ ಮಾಡಿದ್ದರೇ ? ಪ್ರತಿ ವರ್ಷ ಆಸ್ಯುಯಲ್ ಫೈನಾನ್ಷಿಯಲ್ ಸ್ಟೇಟ್‌ಮೆಂಟನ್ನು ಈ ಮನೆಯ ಮುಂದೆ ಇಡುತ್ತೀರಿ. ಅದರಲ್ಲಿ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಅರಿಯರ್ಸ್ ಇದೆ ಎಂಬುದು ತಿಳಿಯುತ್ತದೆ. ಆ ಅರಿಯರ್ಸ್‌ನಲ್ಲಿ ಇದೂ ಕೂಡ ಸೇರಿರುತ್ತದೆ. ವಿವರವಾಗಿ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ನವರು ಪ್ರತಿ ವರ್ಷ ಒಂದು ಸ್ಟೇಟ್‌ಮೆಂಟನ್ನು ಈ ಸಭೆಯ ಮುಂದಿಡುತ್ತಾರೆ. ಅದರಲ್ಲಿ ಈ ಅರಿಯರ್ಸ್‌ನ್ನೂ ಆಳವಡಿಸಿದ್ದಾರೆಂದು ನಾನು ಭಾವಿಸುತ್ತೇನೆ. ಇದರ ಜೊತೆಗೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಲ್ಲೂ ಕೂಡ ಪ್ರತಿಯೊಂದು ಇಲಾಖೆಯಲ್ಲೂ ಎಷ್ಟೆಷ್ಟು ಅರಿಯರ್ಸ್ ಇದೆ ಎಂಬುದನ್ನು ವಿಚಾರಣೆ ಮಾಡತಕ್ಕಂತಹ ಕಾಲದಲ್ಲಿ ಎಷ್ಟು ಅರಿಯರ್ಸ್‌ನ್ನು ಪೆಂಡಿಂಗ್ ಇದ್ದುದನ್ನು ವಸೂಲು ಮಾಡುವುದಕ್ಕೆ ಸಾಧ್ಯ ಆಥವಾ ಸಾಧ್ಯವಿಲ್ಲ ಎನ್ನತಕ್ಕಂಥದ್ದನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ವರದಿಯನ್ನು ಕೊಡುತ್ತಾರೆ. There is no need to refer this matter to a Joint Select Committee. The Public Accounts Committee has got a right to go through all this. ಇದು ಒಂದು ಸಿಕ್ ಇಂಡಸ್ಟ್ರೀಸ್ ಆಗಿರುವುದರಿಂದ ಅವರಿಗೆ ಹಾಕಿರತಕ್ಕಂತಹ ಟ್ಯಾಕ್ಸ್‌ನ್ನು ಮನ್ನಾ ಮಾಡಬೇಕೆಂಬುದಾಗಿ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಮುಂದೆ ಏನಾದರೂ ಮನವಿ ಇದೆಯೋ ಇಲ್ಲವೋ ಎಂಬುದನ್ನೂ ಕೂಡ ವಿಚಾರಣೆ ಮಾಡಬೇಕು. ಇದು ೧೯೭೮ರ ಹಿಂದಕ್ಕೆ ಸಂಬಂಧಪಟ್ಟಂತಹ ವಿಚಾರ. ಆಡಿಟ್ ವರದಿ ಪ್ರತಿ ವರ್ಷ ನಮಗೆ ಬರುತ್ತದೆ. ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ಹಣ ಬಾಕಿ ಇದೆ ಎಂಬುದರ ಬಗ್ಗೆ ನಮ್ಮಲ್ಲಿ ಲೆಕ್ಕ ಇರುತ್ತದೆ. ಆಗಿಂದಾಗ್ಗೆ ವಸೂಲು ಮಾಡಿದ್ದರೂ ಕೂಡ ಅದರ ಬಗ್ಗೆಯೂ ನಮಗೆ ವರದಿಯನ್ನು ಕೊಡಬೇಕಾಗುತ್ತದೆ. ಇದು ಒಬ್ಬ ಪ್ರತಿಭಾನ್ವಿತ ವ್ಯಕ್ತಿಗೆ ಸಂಬಂಧಪಟ್ಟಿದೆ ಎಂಬುದಾಗಿ ಇದನ್ನು ಹೀಗೆ ಬಿಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಬಹಳ ಆಳವಾಗಿ ಯೋಚನೆ ಮಾಡಬೇಕಾಗುತ್ತದೆ. ನಯುವಾಡಿ ಈ ಬಿಲ್ಲನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿ. ಆ ಸಮಿತಿಗೆ ಇದನ್ನೆಲ್ಲಾ ವಿಚಾರಣೆ ಮಾಡ

ತಕ್ಕಂತಹ ಅಧಿಕಾರ ಇದೆ. ಅಲ್ಲಿ ನಿಮ್ಮ ಅಧಿಕಾರಿಗಳನ್ನೂ ಕರೆಸುತ್ತಾರೆ, ಸಂಬಂಧಪಟ್ಟ ಇಂಡಸ್ಟ್ರೀಸ್ ನವರು ಕೊಟ್ಟಿರತಕ್ಕಂತಹ ಮನವಿಯ ಆಧಾರದ ಮೇಲೆ ಅವರಿಗೆ ರಿಯಾಯಿತಿ ಕೊಡಬೇಕೇ ಅಥವಾ ಬೇಡವೇ ಎಂಬುದರ ಬಗ್ಗೆ ಅವರಿಂದ ವರದಿ ಬಂದಮೇಲೆ ನಂತರ ಇದರ ಬಗ್ಗೆ ಆಲೋಚನೆ ಮಾಡೋಣ. ಏಕೆಂದರೆ ಇದು ಈಗಿನ ಸಚಿವ ಸಂಪುಟದಲ್ಲಿರುವ ಒಬ್ಬ ಸದಸ್ಯರಿಗೆ ಸಂಬಂಧಪಟ್ಟದ್ದು. ಇದರ ಬಗ್ಗೆ ಕಣ್ಣುಮುಚ್ಚಿಕೊಂಡು ವ್ಯವಹಾರ ಮಾಡತಕ್ಕಂತಹದ್ದಲ್ಲ. ಇದನ್ನು ಪಾಸ್ ಮಾಡುವುದಕ್ಕೆ ಮುನ್ನ ನಿರ್ಣಯ ತೆಗೆದುಕೊಳ್ಳುವುದಕ್ಕೆ ಮುನ್ನ ಇದರ ಪೂರ್ಣ ವಿಚಾರಣೆಯಾಗದ ಹೊರತು ಇದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ಅಧ್ಯಕ್ಷರೆ, ನಾನು ಈಗ ೧೯೭೭ ಎಂಬುದಾಗಿ ಏಕೆ ಹೇಳಿದೆ ಎಂದರೆ, ವಿವರವನ್ನು ಮುಂದುವರಿಸಿಕೊಂಡು ಹೋಗುವಾಗ ಮಧ್ಯದಲ್ಲಿ ಶ್ರೀಮಾನ್ ದೇವೇಗೌಡರು ನನ್ನನ್ನು ತಡೆದರು, ಅದರ ಮೇಲೆ ಇಷ್ಟೊಂದು ವ್ಯಾಖ್ಯಾನ ಮುಂದುವರಿಯಿತು. The Hon. Members should have patience to hear what I want to say. I was interrupted. We are introducing an amendment to give retrospective effect.

SRI H. D. DEVEGOWDA.—He is harping on the memorandum submitted in 1977.

ಶ್ರೀ ಎಂ. ವೀರಪ್ಪ ಮೊಯಿಲಿ.—ಅದು ಸರಿಯಲ್ಲ. ಅವರು ೧೯೭೭ರಲ್ಲೂ ಕೂಡ ಒಂದು ಮನವಿಯನ್ನು ಕೊಟ್ಟಿದ್ದಾರೆ. ೩೦-೫-೧೯೭೮ರಲ್ಲೂ ಅವರು ಒಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ, ಈ ವಿಚಾರವನ್ನು ಈ ಸದನದ ಸದಸ್ಯರೆಲ್ಲರೂ ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಈ ಒಂದು ಬಿಲ್ಲನ್ನು ಇವತ್ತೇ ಪಾಸ್ ಮಾಡಿಸಿಕೊಳ್ಳಬೇಕೆಂಬ ಆತುರ ನಮ್ಮ ಸರ್ಕಾರಕ್ಕೆ ಏನೂ ಇಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಹಾಗಿದ್ದರೆ ಬಿಡಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇದರಲ್ಲಿ ರಾಜಕೀಯ ಏನೂ ಇಲ್ಲ. ಈವತ್ತೇ ಈ ಬಿಲ್ಲನ್ನು ಪಾಸ್ ಮಾಡಿಸಿಕೊಳ್ಳಬೇಕೆಂಬ ಆತುರ ಏನೂ ಇಲ್ಲ. ಈ ಒಂದು ಉದ್ಯಮದ ದೃಷ್ಟಿಯಿಂದ ಮಾಡಬೇಕೆಂದು, ಅಂದರೆ ೧೦-೪ ೧೯೭೮ ರಿಂದ ೩೧-೯-೧೯೭೮ರ ವರೆಗೆ ಅವರ ಪ್ರಾಜೆಕ್ಟ್ ವರದಿಯಲ್ಲಿ ಈ ಒಂದು ಐಟಂ ಇಲ್ಲದಿರುವುದರಿಂದ ಇದನ್ನು ಮಾಡಿದ್ದೇವೆ. ೩೧ ಲಕ್ಷ ರೂಪಾಯಿಗಳನ್ನು ವಸೂಲು ಮಾಡಬೇಕಾಗಿತ್ತು. ಆದರೆ ಅದನ್ನು ವಸೂಲು ಮಾಡಲಿಲ್ಲ. ವಸೂಲು ಮಾಡದೇ ಇರುವುದಕ್ಕೆ ಅವರು ಆಗಾಗ್ಗೆ ಒಂದೊಂದು ಮನವಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ.
We are not in a hurry. But whether this House considers to look into the problem of this particular Industry, is the question before us. This Bill was before the Government, of course this bill was framed by the Government which was in power then.

ಶ್ರೀ ಕೆ.ಎಚ್. ಶ್ರೀನಿವಾಸ್.—ಅಧಿಕಾರಿಗಳು ವಸೂಲು ಮಾಡದಿದ್ದರೆ.....

ಅಧ್ಯಕ್ಷರು.—ತಾವು ಮಾನ್ಯ ಹಣಕಾಸಿನ ಸಚಿವರು ಮಾತನಾಡುವಾಗ ಮಧ್ಯದಲ್ಲಿ ಮಾತನಾಡಬೇಡಿ.

ಶ್ರೀ ಎಚ್.ಡಿ. ದೇವೇಗೌಡ.—ನಾನು ಮಾನ್ಯ ಹಣಕಾಸಿನ ಸಚಿವರ ಮೇಲೆ ಯಾವುದೇ ರೀತಿಯ ಆರೋಪಣೆಯನ್ನು ಮಾಡುವುದಕ್ಕೆ ಹೋಗುವುದಿಲ್ಲ. ಅವರು ಹೇಳಿದ್ದನ್ನು ನಾನು ಒಪ್ಪಿಕೊಳ್ಳುತ್ತೇನೆ. ನಮ್ಮ ಸರ್ಕಾರಕ್ಕೆ ಈ ಸದನದ ಮುಂದೆ ಈ ಒಂದು ರಿಯಾಯಿತಿ ಕೊಡತಕ್ಕಂತಹ ಈ ವಿಧೇಯಕವನ್ನು ಇವತ್ತೇ ಪಾಸ್ ಮಾಡಬೇಕು ಎನ್ನತಕ್ಕಂತಹ ತೀವ್ರತೆ ಏನೂ ಇಲ್ಲ ಎಂಬುದನ್ನು ಮಾನ್ಯ ಹಣಕಾಸಿನ ಸಚಿವರೇ ಒಪ್ಪಿಕೊಳ್ಳುತ್ತಾರೆ. ಆದುದರಿಂದ ಇದರ ಪೂರ್ಣ ಕಡತವನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿ ಅವರು ಇಡೀ ಕಡತವನ್ನು ವೆರಿಫೈ ಮಾಡುತ್ತಾರೆ. ಸಂಬಂಧಪಟ್ಟ ಇಂಡಸ್ಟ್ರೀಸ್ ನವರು ಕೊಟ್ಟಿರತಕ್ಕಂತಹ ಮೊಮರಾಂಡಂನ ಆಧಾರದಮೇಲೆ ಪರಿಶೀಲನೆ ಮಾಡಿ ಇದಕ್ಕೆ ರಿಯಾಯಿತಿ ಕೊಡಬಹುದೇ ಅಥವಾ ಕೊಡಬಾರದೆ ಎಂಬುದರ ಬಗ್ಗೆ ನಮಗೆ ಒಂದು ವರದಿಯನ್ನು ಕೊಡುತ್ತಾರೆ. ನಂತರ ಇದರ ಬಗ್ಗೆ ವಿಚಾರ ಮಾಡೋಣ. The entire deal has to be referred to the Public Accounts Committee.

SRI C.M. ARUMUGHAM.—I want to make another proposal. Let the matter be referred to a small Committee of this House consisting of five or six members constituted for this purpose only.

SRIM. VEERAPPA MOILY.—The issue boils down to this; It seems that hon'ble Members want some time for discussion of this matter in detail. I have submitted that the Government is not in a hurry to bring this Bill and pass it. So many things have been said by so many hon'ble Members, even by the hon'ble. Members who were in the last Ministry and who framed this Bill. They themselves suspect that there may be some powerful forces which must have been responsible to initiate this Bill. It may be or may not be. This Government is concerned about the merit of the Bill and not who initiated the Bill. It is a secondary question

SRI H.D. DEVEGOWDA.—I am only concerned with the State exchequer, and I am not concerned whether the Bill was initiated by Urs Government or this Government.

SRI M. VEERAPPA MOILY. - I am also very much concerned with the State exchequer; a lot of erosion in the State's finance is made; the very financial base is eroded. By whom and how and all those things, I will be in a position to give in due course.

SRI K.H. SRINIVAS.—Unfortunately, this Bill further drain the resources.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ ತಾವು ಆ ಜಾಗದಲ್ಲಿ ಕುಳಿತುಕೊಂಡು ಸರ್ಕಾರಕ್ಕೆ ಬರ ತಕ್ಕಂತಹ ಹಣ ಪೋಲಾಗುವುದಕ್ಕೆ ಅವಕಾಶ ಕೊಡಬಾರದು.

SRI K.H. SRINIVAS.—There must be some rules.

SRI M. VEERAPPA MOILY.—I share the serious and sincere concern expressed by the hon'ble. Members about the erosion of the State's finances. But, at the same time, I cannot understand the stand of Sri K.H. Srinivas, who was a Minister earlier. Now he himself suspects. I also feel that this matter has got to be looked into. I personally feel that a full-dressed debate has to take place. The Public Accounts Committee in its Report has brought out certain things. Everyone must seriously view the case even if it is a question of a few thousands of rupees or even if it is a single pie of the exchequer. I am equally concerned about it in view of the Portfolio of Finance I am holding. Hon'ble Speaker can give sufficient time to the hon'ble Members who desire to speak on the Bill. Let there be a full-dressed debate on the Bill. I am prepared to explain this Bill in detail. I am not prepared to shirk the responsibility. We can take it up tomorrow.

SRI H.D. DEVEGOWDA.—This matter has to be referred to the Public Accouts Committee. ಈ ಸದನದಲ್ಲಿ ಬರತಕ್ಕಂತಹ ಎಲ್ಲ ಬಿಲ್ಲುಗಳ ಮೇಲೆ ಚರ್ಚೆಯಲ್ಲಿ ಭಾಗವಹಿಸತಕ್ಕಂತಹ ಸಂದರ್ಭದಲ್ಲಿ ನಾನು ಬಹಳ ಕಡಿಮೆ ಕಾಲವನ್ನು ತೆಗೆದುಕೊಂಡು ಬಂದಿದ್ದೇನೆ. ಸಾಮಾನ್ಯವಾಗಿ ಯಾವುದಾದರೂ ಬಿಲ್ಲುಗಳು ಚರ್ಚೆಗೆ ಬಂದಾಗ ಕಾನೂನನ್ನು ತಿಳಿದಿರತಕ್ಕಂತಹ ವರೇ ಹೆಚ್ಚು ಬಿಲ್ಲುಗಳ ಬಗೆ ಚರ್ಚೆ ಮಾಡಿಕೊಂಡು ಬಂದಿದ್ದಾರೆ: ಆದರೆ ಇದು ಹಣದ ವಿಷಯವಾದ್ದರಿಂದ ಇದರಲ್ಲಿ ಕೆಲವು ತೊಡಕುಗಳು ಇರುವುದರಿಂದ ಎರಡು ತಿಂಗಳು ಬಿಟ್ಟು ಪಾಸ್ ಮಾಡಿದರೆ ಏನಾಗುತ್ತದೆ? ಇದನ್ನು ಸಾವ ಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಬೇಕೆಂದು ಈಗಾಗಲೇ ನಾನು ಹೇಳಿದ್ದೇನೆ. ರಾಜ್ಯಾಂಗದ ಚೌಕಟ್ಟಿನಲ್ಲಿ ಹಣಕಾಸಿಗೆ ಸಂಬಂಧಪಟ್ಟ ವಿಚಾರವನ್ನು ಪರಿಶೀಲನೆ ಮಾಡುವುದಕ್ಕೆ ಆ ಒಂದು ಸಮಿತಿಗೆ ಅಧಿಕಾರ ಇದೆ. It is a mini Legislature. It is a creature of this House which is empowered to go through all these financial matters. ನೆರೆ ರಾಜ್ಯವಾದ ಕೇರಳದಲ್ಲಿರತಕ್ಕಂತಹ ಟ್ಯಾಕ್ಸ್ ಸ್ಪೆಕ್ಟರ್ ಇದ್ದಹಾಗೆ ನಾವು ಹಾಕಿರತಕ್ಕಂತಹ ತೆರಿಗೆಯನ್ನು ಈ ಇಂಡಸ್ಟ್ರೀಸ್ ನವರಿಂದ ವಸೂಲು ಮಾಡಬಹುದೇ ಅಥವಾ ಬೇಡವೇ ಎಂಬುದನ್ನು ಆ ಕಮಿಟಿಯು ವಿಚಾರಣೆ ಮಾಡಿ ವರದಿಯನ್ನು ಕೊಟ್ಟರೆ ಇಂತಹ ಸಂಶಯಕ್ಕೆ ಎಡೆ ಕೊಡುವುದಿಲ್ಲ. ಆದ್ದರಿಂದ ದಯಮಾಡಿ ಮಾನ್ಯ ಹಣಕಾಸಿನ ಸಚಿವರು ಇದನ್ನು ಒಪ್ಪಿಕೊಳ್ಳಬೇಕು. ಆ ಬಗ್ಗೆ ಅಧಿಕಾರಿಗಳು ಏನು ಹೇಳುತ್ತಾರೆ. ನೆರೆ ರಾಜ್ಯದಲ್ಲಿ ಪರಿಸ್ಥಿತಿ ಏನಿದೆ ಎಂಬುದನ್ನು ಸಮಿತಿಯವರು ಪರಿಶೀಲನೆ ಮಾಡುತ್ತಾರೆ. ಮಾನ್ಯ ಅರ್ಥ ಸಚಿವರು ಹೇಳಿದ ರೀತಿಯಲ್ಲಿ ಇಡೀ ಫೈಲನ್ನು ಇಲ್ಲಿ ಕೂತು ಪರಿಶೀಲನೆ ಮಾಡುವುದಕ್ಕಾಗುವುದಿಲ್ಲ how can we go through the entire file? ಸರ್ಕಾರಕ್ಕೆ ೧೯೭೬ ರಿಂದ ಬರಬೇಕಾಗಿರತಕ್ಕಂತಹ ಹಣ ಇದು. ಈಗ ನಾವು ೮೦ ರಲ್ಲಿದ್ದೇವೆ. ನಾಲ್ಕು ವರ್ಷಗಳಿಂದ ವಸೂಲು ಮಾಡದೇ ಇದ್ದಂತಹ ಹಣವನ್ನು ಇನ್ನೂ ೨ ತಿಂಗಳು ಮುಂದೆ ಹೋಗರೆ ಪ್ರಪಂಚ ಏನು ಮುಳುಗಿ ಹೋಗುವುದಿಲ್ಲ. ತಾವು ಬಹಳ ಜವಾಬ್ದಾರಿ ಯುತವಾದ ಜಾಗದಲ್ಲಿದ್ದೀರಿ. ಈ ಹಿಂದೆ ತಾವು ಪತ್ರಿಕೆಯಲ್ಲಿ ಈ ರಾಜ್ಯದ ಸಂಪನ್ಮೂಲ ಯಾವ ರೀತಿ ಪೋಲಾಗಿದೆ ಎಂಬುದನ್ನೂ ಕೂಡ ಈಗಾಗಲೇ ಹೇಳಿದ್ದೀರಿ. Even if it is done in the period of Sri Devaraj Urs Government. it is the bounden duty of this Government to expose it. ಇವತ್ತು ಶ್ರೀಮಾನ್ ಶ್ರೀನಿವಾಸ್‌ರವರ ಬಗ್ಗೆ ಹೇಳುವುದಾದರೆ, ನಿಜವಾಗಿಯೂ ನಾನು ಅವರನ್ನು ಶ್ಲಾಘನೆ ಮಾಡುತ್ತೇನೆ. ಕಾರಣ ಸರ್ಕಾರಕ್ಕೆ ಬರತಕ್ಕಂತಹ ೩೧ ಲಕ್ಷ ರೂಪಾಯಿ ಬರದೆ ಹೋಗುತ್ತಿದ್ದುದನ್ನು ತಪ್ಪಿಸಿದ್ದಾರೆ. ಅವರು ಹಿಂದೆ ಆಳುವ ಪಕ್ಷದಲ್ಲಿದ್ದರು. ಇಂದು ವಿರೋಧಪಕ್ಷದಲ್ಲಿದ್ದಾರೆ. ವಿರೋಧಪಕ್ಷಕ್ಕೆ ಬಂದ ಪ್ರಥಮ ಕಾಣಿಕೆಯಾಗಿ ೩೧ ಲಕ್ಷ ರೂಪಾಯಿಗಳನ್ನು ಸರ್ಕಾರಕ್ಕೆ ಬರದೆ ಹೋಗುತ್ತಿದ್ದುದನ್ನು ತಪ್ಪಿಸಿದ್ದಾರೆ. ನಾನು ಅವರಿಗೆ ಶ್ಲಾಘನೆ ಮಾಡುತ್ತೇನೆ. ತಾವು ಇದನ್ನು ಸಾರ್ವಜನಿಕ ಲೆಕ್ಕಪತ್ರ ಸಮಿತಿಗೆ ರೆಫರ್ ಮಾಡಿ. ಅವರು ಈ ಬಗ್ಗೆ ವರದಿಯನ್ನು ಕೊಟ್ಟಮೇಲೆ ನಂತರ ತಾವು ಬೇಕಾದರೆ ಈ ಬಿಲ್ಲನ್ನು ಇಲ್ಲಿ ಮುಂದನೆ ಮಾಡಬಹುದು ಇದಕ್ಕೆ ತಾವು ಒಪ್ಪಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

SRI B.B. SAYANAK.—I submit one thing. This is a small Bill. As you know the Hon'ble Finance Minister is not properly guiding us. Therefore, what my hon'ble friend Sri C.M. Arumugham has said is correct, that this Bill may be referr d to a Select or a Joint Select Committee or any Committee so that we can have a clear picture.

ಶ್ರೀ ಎಂ. ವೀರಪ್ಪ ಮೊಯ್ಲಿ,—ಮಾನ್ಯ ಸದಸ್ಯರಿಗೆ ಯಾವ ಯಾವ ವಿವರ ಬೇಕು, ಎಂಬುದನ್ನು ತಿಳಿಸಿದರೆ ಆ ವಿವರಗಳನ್ನು ಕೊಡುವುದಕ್ಕೆ ಸರ್ಕಾರ ಸಿದ್ಧವಿದೆ. ಆದರೆ ಹೀಗೆ ಒಂದೊಂದೇ ಪ್ರಶ್ನೆಯನ್ನು ಹಾಕುತ್ತಾ ಹೋದರೆ ಮಾನ್ಯ ಸದಸ್ಯರಿಗೆ ಯಾವುದರ ಬಗ್ಗೆ ವಿವರ ಬೇಕು, ಯಾವುದರ ಬಗ್ಗೆ ವಿವರ ಬೇಡ ಎಂಬುದು ಅರ್ಥವಾಗುವುದಿಲ್ಲ. ಈಗ ಈ ಸದನದ ಮುಂದೆ ತಂದಂತ ಮಸೂದೆಯನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕಳುಹಿಸಬೇಕೆಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದು ಒಂದು ಹೊಸ ಸಂಪ್ರದಾಯವನ್ನು ಹಾಕಿ ಕೊಟ್ಟಂತಾಗುತ್ತದೆ. ಯಾವಾಗ ಈ ಮಸೂದೆಯ ಬಗ್ಗೆ ವಿಚಾರಗಳನ್ನು ಈ ಸದನದ ಮುಂದೆ

ಇಡುತ್ತೇವೆಯೋ ಆಗ ಅದಕ್ಕೆ ಸಮರ್ಪಕವಾಗಿ ಉತ್ತರವನ್ನು ಕೊಡಬೇಕಾದ ವ್ಯವಸ್ಥೆ ಇಲ್ಲ. ಮಾನ್ಯ ಸದಸ್ಯರಾದ ಶ್ರೀ ಶ್ರೀನಿವಾಸ್ ಅವರು ೩೦ ಲಕ್ಷ ರೂಪಾಯಿಗಳನ್ನು ಉಳಿಸಿದ್ದರೆ ಪ್ರಯೋಜವಾಗುತ್ತಿತ್ತು ಎಂದು ಹೇಳಿದರು. ನಾವು ಎಲ್ಲಾ ಪ್ರಯತ್ನವನ್ನೂ ಮಾಡುತ್ತೇವೆ. ದೇಶದ ಹಣ ಪೋಲು ಆಗುವುದಾದರೆ ನಾವು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತೇವೆ. ಬಹುಷಃ ಈ ವಿಷಯದಲ್ಲಿ ಬೇಗ ಚಿಂತನೆಯನ್ನು ಮಾಡುತ್ತೇವೆ. ಇದನ್ನು ಬಹಳ ತಡವಾಗಿ ಮಾಡಿದರೂ ಕೂಡ ಈಗ ಇದರಿಂದ ಬಹಳ ಒಳ್ಳೆಯ ಸಂಪ್ರದಾಯವನ್ನು ಹಾಕುವಂತಹ ಒಂದು ವಿಚಾರಧಾರೆ ಬಂದಿದೆ. ಇದು ಸ್ವಾಗತ ವಾದುದು. ಆದರೆ ಈಗ ಈ ಮಸೂದೆಯ ಬಗ್ಗೆ ಪೂರ್ತಿಯಾಗಿ ಡಿಸ್‌ಕಷನ್ ಆದಮೇಲೆ ಇದನ್ನು ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಕಳುಹಿಸಿ ಒಂದು ಹೊಸ ಸಂಪ್ರದಾಯವನ್ನು ಹಾಕುವುದಕ್ಕೆ ನಾನು ತಯಾರು ಇಲ್ಲ. ಬೇಕಾದರೆ ಇದನ್ನು ಬಿಜಿನೆಸ್ ಆಡ್ವೈಜರಿ ಕಮಿಟಿಗೆ ಹಾಕೋಣ. ಈ ಕಡೆಯ ಮಾನ್ಯ ಸದಸ್ಯರು ಮತ್ತು ಆ ಕಡೆಯ ಮಾನ್ಯ ಸದಸ್ಯರು ಈ ಮಸೂದೆಯ ಬಗ್ಗೆ ಚರ್ಚೆ ಮಾಡಲಿ. ಆಗ ನಾನು ಸದಸ್ಯರಿಗೆ ಸಮರ್ಪಕವಾದ ಉತ್ತರವನ್ನು ಕೊಡುತ್ತೇನೆ. ನಾವು ಇಪ್ಪತ್ತೇ ಈ ಬಿಲ್ಲನ್ನು ಪಾಸು ಮಾಡಬೇಕಾದ ಆತುರವಿಲ್ಲ. ಈ ರಾಜ್ಯದ ವ್ಯವಹಾರಿಕ ದೃಷ್ಟಿಯಲ್ಲಿ ಅಭಿವೃದ್ಧಿ ದೃಷ್ಟಿಯಲ್ಲಿ ಸಹಾಯ ಆಗುವುದಾದರೆ ಈ ಬಿಲ್ಲನ್ನು ಪಾಸು ಮಾಡೋಣ. ಇಲ್ಲದಿದ್ದರೆ ಬೇಡ.

ಶ್ರೀ ಎಚ್.ಡಿ. ದೇವೇಗೌಡ.—ಇಂಥಾ ಮಸೂದೆಯನ್ನು ಪಬ್ಲಿಕ್‌ಅಕೌಂಟ್ಸ್ ಕಮಿಟಿಗೆ ರೆಫರ್ ಮಾಡತಕ್ಕ ಹೊಸ ಸಂಪ್ರದಾಯವನ್ನು ನಾವು ಇವೊತ್ತು ಹಾಕುತ್ತಿಲ್ಲ. ಸಮ್ಮ ರಾಜ್ಯದ ಖಜಾನೆಗೆ ಬರ ತಕ್ಕ ಹಣ ಯಾವ ಯಾವ ಇಲಾಖೆಯಲ್ಲಿ ಎಷ್ಟೆಷ್ಟು ವಸೂಲು ಆಗಿಲ್ಲ ಎನ್ನತಕ್ಕಂಥಾದ್ದನ್ನು ಪರಿಶೀಲನೆ ಮಾಡುವುದಕ್ಕೆ ವಿಶೇಷವಾಗಿ ಸಾರ್ವಜನಿಕ ಸಮಿತಿಗೆ ಇಗುವ ಅಧಿಕಾರವನ್ನು ಚಲಾಯಿಸಿ ಎಂದು ನಾನು ಹೇಳುತ್ತೇನೆ. ನಾನು ಹೊಸ ಸಂಪ್ರದಾಯವನ್ನು ನಿರೂಪಣೆ ಮಾಡುವುದಕ್ಕೆ ಹೋಗುವುದಿಲ್ಲ. ಪಬ್ಲಿಕ್ ಅಕೌಂಟ್ಸ್ ಕಮಿಟಿಗೆ ಇರತಕ್ಕ ಅಧಿಕಾರ ಯಾವ ಯಾವ ಇಲಾಖೆಯಲ್ಲಿ ಸರ್ಕಾರದ ಖಜಾನೆಗೆ ಹಣ ಬರ ಬೇಕಾಗುತ್ತದೆ; ಅದು ಏತಕ್ಕೆ ವಸೂಲು ಆಗಿಲ್ಲ, ಆ ಇಲಾಖೆಯ ಅಧಿಕಾರಿಗಳನ್ನು ಕರೆಸಿ ವಿಚಾರಣೆ ಮಾಡತಕ್ಕ ವಿಧಿವತ್ತಾದ ಅಧಿಕಾರವನ್ನು ಸರ್ಕಾರ ಕೊಟ್ಟಿದೆ. ಆ ಕೆಲಸವನ್ನು ಮಾಡುವುದಕ್ಕೆ ಅವಕಾಶ ಕೊಡಿ. ನಾನು ಪಬ್ಲಿಕ್ ಅಕೌಂಟ್ಸ್ ಕಮಿಟಿಯ ಚೇರ್ಮನ್ ಆಗಿದ್ದಾಗ ಇದೇ ಸಂಸ್ಥೆಯವರಿಗೆ ೧೯ ಲಕ್ಷ ರೂಪಾಯಿಗಳ ರಿಯಾಯಿತಿಯನ್ನು ತೋರಲಾಗಿತ್ತು. ಸಭೆಯ ಮುಂದೆ ಇರತಕ್ಕ ವಿಧೇಯಕದ ಸಂಬಂಧ ವಾಗಿ ನಾವು ಸ್ವಲ್ಪ ಮಾತನಾಡಬೇಚಾಗುತ್ತದೆ. ರಾಜಕೀಯ ಪ್ರಭಾವ ಇರತಕ್ಕ ವ್ಯಕ್ತಿಗೆ ಸರ್ಕಾರದ ಹಣ ವನ್ನು ರಿಯಾಯಿತಿ ಕೊಟ್ಟು ಯಾರೋ ಒಬ್ಬ ಸಾಮಾನ್ಯ ರೈತ ಪಂಪುಸೆಟ್ಟಿಗೆ ತೆರಿಗೆ ಕಟ್ಟಲಿಲ್ಲ ಎಂದರೆ ವಿದ್ಯುಚ್ಛಕ್ತಿಯನ್ನು ಡಿಸ್ ಕನೆಕ್ಟ್ ಮಾಡುತ್ತಾರೆ. ಬಡವರ ಬಗ್ಗೆ ಮಾತನಾಡುವ ನೀವು ಬಡವನಿಗೆ ಸಹಾಯ ಮಾಡಬೇಕು. I would like to caution the Government. Let this matter be examined by the Public Accounts Committee.

ಅಧ್ಯಕ್ಷರು.—ಈಗಾಗಲೇ ಈ ಮಸೂದೆಯ ಬಗ್ಗೆ ಚರ್ಚೆ ನಡೆದಿದೆ. ಈ ಚರ್ಚೆಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟು ಮುಗಿದಿದೆಯೋ ಏನೋ ಗೊತ್ತಿಲ್ಲ. ಈ ಸಂದರ್ಭದಲ್ಲಿ ಮತ್ತೆ ಈ ಮಸೂದೆಯ ಮೇಲೆ ಚರ್ಚೆ ಮಾಡಬೇಕು ಎನ್ನತಕ್ಕ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಮಸೂದೆಯ ಮೇಲೆ ಇದುವರೆಗೂ ಚರ್ಚೆ ನಡೆದು ಆ ಚರ್ಚೆಗೆ ಈಗ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ, ಈ ಸಂದರ್ಭದಲ್ಲಿ ಮತ್ತೆ ಚರ್ಚೆ ಮಾಡಬೇಕು ಎನ್ನುವುದು ಸರಿಯಾದ್ದಲ್ಲ, ಬೇಕಾದರೆ ಮಾನ್ಯ ಸದಸ್ಯರು ಕೆಲವು ಕ್ಲಾರಿಫಿಕೇಷನ್ ಕೇಳಿ ಮಾನ್ಯ ಮಂತ್ರಿಗಳಿಂದ ಉತ್ತರವನ್ನು ಪಡೆಯಬಹುದು, ಅಥವಾ ಮಾನ್ಯ ಸದಸ್ಯರಿಗೆ ಹೆಚ್ಚಿನ ಇನ್‌ಫರ್‌ಮೇಷನ್ ಬೇಕಾದರೆ ಮಾನ್ಯ ಮಂತ್ರಿಗಳು ಕೊಡ ಬಹುದು.

ಶ್ರೀ ಎಂ. ವೀರಪ್ಪಮೊಯಿಲಿ.—ನಾನು ಇನ್ನೂ ಈ ಮಸೂದೆಯ ಮೇಲೆ ನಡೆದ ಚರ್ಚೆಗೆ ಉತ್ತರವನ್ನು ಕೊಡುವುದು ಮುಗಿದಿಲ್ಲ. ಮಾನ್ಯ ಸದಸ್ಯರಿಗೆ ಹೆಚ್ಚಿನ ಮಾಹಿತಿ ಬೇಕಾದರೆ ನಾನು ಕೊಡುವುದಕ್ಕೆ ಸಿದ್ಧವಾಗಿದ್ದೇನೆ. ಆದರೆ ಈಗ ಒಂದು ಪ್ರಬಲವಾದ ಮತ್ತು ಗಂಭೀರವಾದ ವಿಚಾರವೇ ನೆಂದರೆ ಮಾನ್ಯ ಸದಸ್ಯರಾದ ಶ್ರೀಮಾನ್ ದೇವೇಗೌಡರು ಮತ್ತು ಕೆಲವು ಮಾನ್ಯ ಸದಸ್ಯರು ಹೇಳಿದರು ನಾವು ರಾಜಕೀಯ ಪ್ರಭಾವದಿಂದ ಕನ್‌ಸೇಷನ್ ಕೊಡುತ್ತಿದ್ದೇವೆ ಎಂದು. He was very clear. He has not made any allegation. He said that there are certain forces which must have worked against this. This is a very

serious allegation. ಆದ್ದರಿಂದ ನಾನು ಪುನಃ ತಮ್ಮಲ್ಲಿ ಮನವಿ ಮಾಡಿಕೊಳ್ಳುವುದು ಏನೆಂದರೆ It is the question of giving some concession. Even if the House desires to refer it to the Public Accounts Committee, Government would like to consider that aspect. If it is found that there is some *malafide* intention, we will look into it and if found necessary will refer this to the Public Accounts Committee because we are not in an hurry to get it passed.

ಶ್ರೀ ಎಸ್. ಆರ್. ಬೊಮ್ಮಾಯಿ.—ನಾನು ಈ ಚರ್ಚೆಯಲ್ಲಿ ಭಾಗವಹಿಸುವುದಕ್ಕೆ ಅವಕಾಶವಿಲ್ಲ ಎಂದು ನಾನು ಕುಳಿತುಕೊಂಡಿದ್ದೆ. ಮಾನ್ಯ ಅರ್ಥ ಮಂತ್ರಿಗಳ ಕಷ್ಟವನ್ನು ನಾನು ಅರಿತುಕೊಂಡಿದ್ದೇನೆ ಅದು ಅರ್ಥಮಂತ್ರಿಗಳಿಗೂ ಅರ್ಥವಾಗಿದೆ. ನಮಗೂ ಅರ್ಥವಾಗಿದೆ. ಈ ಬಿಲ್ಲು ಏನಿದೆ ಇದು ಹಿಂದೆ ಇದ್ದಂತಹವರು ತಯಾರು ಮಾಡಿದ್ದು. ಆ ಬಿಲ್ಲನ್ನೇ ಇವೊತ್ತಿನ ದಿವಸ ತಂದಿದ್ದಾರೆ, ಇದರ ಹಿನ್ನೆಲೆಯನ್ನು ಸಂಪೂರ್ಣವಾಗಿ ತಿಳಿದುಕೊಳ್ಳುವುದಕ್ಕೆ ಆಗಿಲ್ಲ. ಇದನ್ನು ಏತಕ್ಕೆ ತಂದರು ಇದರ ಇಂಪ್ಲಿಕೇಷನ್ ಏನು ಎಂಬುದನ್ನು ತಿಳಿದುಕೊಳ್ಳುವುದು ಸ್ವಲ್ಪ ಕಷ್ಟ. ಇದರಲ್ಲಿ ರಾಜಕೀಯ ಉದ್ದೇಶ ಇದೆಯೋ ಇಲ್ಲವೋ ಗೊತ್ತಿಲ್ಲ. ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣವನ್ನು ಸೂಕ್ತವೋ ಅಲ್ಲವೋ ಎಂಬುದನ್ನು ಆಲೋಚನೆ ಮಾಡಬೇಕು. ಅಥವಾ ಒಂದು ಕಾಲಕ್ಕೆ ಅದು ಸೂಕ್ತವಾಗಬಹುದು. ಯಾವುದೇ ಒಂದು ಪರಿಹಾರವನ್ನು ಕೊಡಂವುದು ಒಂದು ಸದುದ್ದೇಶದಿಂದ. ಅಲ್ಲದೆ ಕೆಲವೊಂದು ವ್ಯಕ್ತಿಗಳಿಗೆ ಲಾಭ ಮಾಡುವ ದೃಷ್ಟಿಯಿಂದ ಸರ್ಕಾರದ ಬೊಕ್ಕಸಕ್ಕೆ ಬರತಕ್ಕ ಹಣ ಬರದಿದ್ದರೆ ಇದರ ಬಗ್ಗೆ ಆಲೋಚನೆ ಮಾಡುತ್ತೇನೆ ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ.

MR. SPEAKER.—On some other day, we will take up this Bill. Now the Hon'ble Minister for Revenue and Agriculture may please move the Bill.

SRI S. BANGARAPPA (Minister for Revenue and Agriculture).—I beg to move that the Mysore Religious and Charitable Institutions (Karnataka Amendment) Bill, 1979, be taken into consideration.

*The question was proposed*

೫-೩೦ ಪಿ.ಎಂ.

† ಶ್ರೀ ಎಸ್. ಬಂಗಾರಪ್ಪ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಇದು ಒಂದು ಸಣ್ಣ ತಿದ್ದುಪಡಿ. ಮೈಸೂರು ರಿಲಿಜಿಯಸ್ ಮತ್ತು ಚಾರಿಟಿಬಲ್ ಎಂಡೋಮೆಂಟ್ ೧೯೨೭. ಇದು ಹಳೆಯ ಮೈಸೂರು ರಾಜ್ಯಕ್ಕೆ ಸಂಬಂಧಪಟ್ಟದ್ದು ಇದು ೧೯೨೭ ರಲ್ಲಿ ಪಾಸ್ ಆಗಿರತಕ್ಕಂಥಾದ್ದು. ಈ ಆಕ್ಟಿನಲ್ಲಿ ಒಂದು ಕಾಲಂ ಇರಲಿಲ್ಲವೆಂದು ಹೈಕೋರ್ಟಿನವರು ಗೌರ್ನಮೆಂಟ್ ಆಕ್ಷನ್ ವಿರುದ್ಧವಾಗಿ ಒಂದು ತೀರ್ಪುಕೊಟ್ಟರು. ನಾವು ಆ ತೀರ್ಪನ್ನು ನೋಡಿದಮೇಲೆ ಅದಕ್ಕೆ ಕಾಂಪ್ರಮೈಸ್ ಮತ್ತು ರಿಸರ್ವ್ ಫಂಡ್ " ಆನ್ಯೂಯಲ್ ರಿಪೇರ್ಸ್ ಗಳಿಗೆ ಮತ್ತು ಅದರ ಪುರೋಬಿವೃದ್ಧಿ " ಗಾಗಿ ಖರ್ಚು ಮಾಡುತ್ತಾ ಬಂದಿದ್ದಾರೆ. ಹಳೆಯ ಮೈಸೂರು ರಾಜ್ಯದಲ್ಲಿ ಈ ಕಾನೂನು ತಂದಿರತಕ್ಕಂಥಾದ್ದು. ಇದು ಹಳೆಯ ಮೈಸೂರು ಚಾರಿಟಬಲ್ ಅಂಡ್ ಎಂಡೋಮೆಂಟ್ಸ್ ಇನ್ಸ್‌ಟ್ಯೂಷನ್ ೧೯೨೭ರಲ್ಲಿ ಒಂದು ಸೆಕ್ಷನ್ ಸೇರಿಸಬೇಕಾಗಿದೆ. ವಿಷಯ ಏನು ಎಂದರೆ ಆನ್ಯೂಯಲ್ ಇನ್‌ಕಂ ನಲ್ಲಿ ಸಣ್ಣಪ್ರಟ್ಟ ದೇವಸ್ಥಾನಗಳಲ್ಲಿ ಬರುವ ಉತ್ಪನ್ನದಿಂದ ಅದರ ಖರ್ಚುವೆಚ್ಚಗಳನ್ನು ತೂಗಿಸಿಕೊಂಡು ಬರಬೇಕಾಗುತ್ತದೆ. ಇವು ಸಣ್ಣ ಇನ್ಸ್‌ಟ್ಯೂಷನ್‌ಗಳಾಗಿರುವುದರಿಂದ ಆವಕ್ಕೆ ೫ ಪರ್ಸೆಂಟಿನಿಂದ ೧೫ ಪರ್ಸೆಂಟ್‌ವರೆಗೆ ರಿಸರ್ವ್ ಫಂಡಿ ಗೋಸ್ಕರ ಹಣವನ್ನು ಕಲೆಕ್ಟ್ ಮಾಡಿದೆ. ಹಳೆಯ ಮೈಸೂರು ರಾಜ್ಯದಲ್ಲಿ ಮಾತ್ರ. ಇದರ ಬಗ್ಗೆ ಶಿವಮೊಗ್ಗ ಜಿಲ್ಲೆಯವರು ಹೈಕೋರ್ಟಿನಲ್ಲಿ ರಿಟ್ ಹಾಕಿದರು. ಆದರಲ್ಲಿ ೧೯೨೭ ರ ಆಕ್ಟಿನಲ್ಲಿ